ಶ್ರೀನಿವಾಸ ಜಾಲವಾದಿ ಯಾದಗಿರಿ ಜಿಲ್ಲೆಯ ಸುರಪುರದವರು. ಉಪಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿ, ನಿವೃತ್ತರು. 'ಮೀಸೆ ಮಾವ', 'ಮಿಸ್ಸಳ ಭಾಜಿ ಹಾಗೂ ಇತರ ಲಲಿತ ಪ್ರಬಂಧಗಳು' ಅವರ ಪ್ರಕಟಿತ ಕೃತಿಗಳು. ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಅಂತ ಸರಕಾರ ಆಚರಣೆ ಮಾಡಿದ್ದೂ ಆತು. ಪ್ರತಿವರ್ಷ ನವೆಂಬರದಾಗ ರಾಜ್ಯೋತ್ಸವ ಪ್ರಶಸ್ತಿ ಸಿಗದೇ ಅನೇಕರು ಬೇಸರಗೊಂಡಿದ್ದೂ ಸುದ್ದಿ ಆಗ್ತ ಇರ್ತೈತಿ. ಈಗ ಸರಕಾರ ನಿಗಮ- ಮಂಡಳಿ ಮಾಡಿ ಗೂಟದ ಕಾರು ನೀಡಿ, ಅಸಹಕಾರ ತೋರುವವರಿಗೆ ಸ್ವಲ್ಪ ಸಮಾಧಾನಕರ ಬಹುಮಾನ ನೀಡಿದಂತೆ, ಗ್ಯಾರಂಟಿಗಳಿಗೂ ಅವುಗಳ ಅನುಷ್ಠಾನ ಸರಿಯಾಗಿ ಆಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಲು ರಾಜ್ಯ, ಜಿಲ್ಲಾ, ತಾಲೂಕು ಮಟ್ಟದ ಸಮಿತಿ ಮಾಡಿ, ಸವಲತ್ತು ನೀಡಿ ತನ್ನವರಿಗೆ ಸ್ಥಾನ ಕಲ್ಪಿಸಲು ಹೊಂಟೈತಿ. ಸಮ್ಮೇಳನಗಳ ಅಧ್ಯಕ್ಷರಾಗಿ ಮೆರವಣಿಗಿ ಮಾಡಿಸಿಗೊಂಡು, 'ನನ್ನ ಈ ಜನುಮ ಸಾರ್ಥಕವಾಯಿತು' ಅಂತ ಬೀಗಿದ ಕನ್ನಡಪರಜನರೂ ಅದಾರ. ಇಲ್ಲಾಂದ್ರ ಅದ್ನೇ ಏನಂದ್ರ ಪೇಪರ್ದಾಗ ನ್ಯೂಸ್ ರೂಪದ ಜಾಹಿರಾತು ಬ್ರ್ಯಾಂಡೆಡ್ ಕೊಟ್ಟು ತುಂಬ ಸಂತೋಷ ಅನುಭವಿಸುವವರೂ ಇದ್ದಾರ. ಅದ್ಕೆ ಹೇಳೋದು 'ಲೋಕೋ ಭಿನ್ನ ರುಚಿಃ' ಅಂತ.

ಹಿಂಗ್ಯಾಕ ಮಾಡ್ತಾರಿವ್ರು ಅಂತ ಕೇಳಿದ್ದಕ್ಕ ಗುಂಡ್ಯಾ ಹೇಳ್ದ,'ಮತ್ತ ಏನ ಮಾಡಬೇಕ್ರಿ? ಈಗ ಸುಮ್ನ ಕುಂತರ ಏನ ಯಾರೂ ಕೇಳಂಗಿಲ್ಲ, ಅದ್ಕ ಏನ್ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ' ಅಂತ. ಇಲ್ಲಿ ಪುರುಷನೇ ಇರಲಿ ಸ್ತ್ರೀಯೇ ಇರಲಿ, ಒಟ್ಟಿನ ಮ್ಯಾಗ ಪ್ರಚಾರದಾಗ ಇರ್ಬೇಕು. ಅದು ಪೇಪರನ್ಯಾಗರೇ ಇರಲಿ ಇಲ್ಲಾ ಟಿವ್ಯಾಗರ ಇರಲಿ. ಇದಕ್ಕ ದುಡ್ಡು ಕೊಟ್ಟು ಗೌರವ ಸ್ವೀಕರಿಸಿ ಸಮಾಜದಲ್ಲಿ 'ಬೆಸ್ಟ್ ಮನಶ್ಯಾ ಅದಾನ್ರಿ' ಅಂತ ಕರಿಸಿಕೊಳ್ಳು ಚಟ' ಅಂತ ಅಂತಾರು. ಹಂಗರೆ ಹೇಳ್ರೀ ಕನ್ನಡ ಬೆಸ್ಟ್ ಆಗೋದ್ಯಾವಾಗ ?

'ಮಗಾ ಉಂಡ್ರs ಕೇಡಿಲ್ಲಂತ ಮಳಿ ಬಂದರs ಕೇಡಿಲ್ಲಂತ. ಹೇಳ್ಯಾರು ಹಿರಿಯಾರು. ಹಂಗೇನಪಾ ಅಂದ್ರs, ನಾವು ಈ ಎಲ್ಲಾ ನಗೆಪಾಟಲುಗಳನ್ನು ಸಹಿಸಿಕೊಂಡು ಹೋಗ್ಬೆಕಾಗೈತಿ ನೋಡ್ರಿ. ಯಾನೂ ಮಾಡೂದೈತಿ ಎಲ್ಲಾನೂ ಒಮ್ಮೆಗ್ಲೇ ಬರತಾವು ಅಂತಿರೇನ? ಓ ಭೀ ಬಾತ್ ಸಹಿ ಹೈಜಿ' ಅನ್ನಕೋತ ಮುಂದಕ್ಕೋಗೋದು.

**'ಮಳಿ ಬಂತೋ ಮಾರಾಯಾ**
**ಗುಡಿ ಕಟ್ಟೊ ಸಿದ್ದಯ್ಯಾ'**

ಅಂತ ಹಾಡಾನೂ ಹಾಡ್ತಾರೂ ಹಳ್ಯಾಗ. ಮಳಿ ಬರೋ ಸಂಭ್ರಮ, ಅದರ ಸಿಂಚನ ಅದನ್ನ ಅನುಭವಿಸಿಯೇ ಸುಖಿಸಬೇಕು. ಬರೀ ಪದಗಳಲ್ಲಿ ಇದನ್ನು ಹಿಡಿದಿಡಲಾಗದು.

**ಮಳಿ ಮಳಿ ಎಂಥಾ ಮಳಿ**
**ಸುಖವ ತರುವ ಮಳಿ**
**ಸಮೃದ್ಧಿಯ ತರೂ ಮಳಿ**
**ಲಾಲಿತ್ಯದಿಂದ ಕೂಡಿದ ಮಳಿ**
**ಭರತ ನಾಟ್ಯ, ಕೂಚುಪುಡಿಯ ಮಳಿ**
**ರಭಸದ ಮಳಿ ಕೆಂಡದ ಮಳಿ**
**ಚಂಡ ಮಾರುತದಂಥ ಮಳಿ**
**ಹೊಳಿ ತುಂಬಿ ತುಳಿಕ್ಯಾಡುವ ಮಳಿ**
**ಎದೆಯ ಬಾನಂಗಳದಿ ನಲ್ಲೆಯ ಪಿಸುನುಡಿಯ ಮಳಿ**

ಹೀಂಗೇನಂದ್ರs ಮಳಿ ಜಿಟಿ ಜಿಟಿ ಹತ್ತಿದಂಗ ಬೇಕಾದಷ್ಟು ಹೇಳಬಹುದು. ಸಂಜಿಕ್ಕಿ ಬಂದ ಮಳಿ ನಿಂದ್ರಂಗಿಲ್ಲಂತ, ಸಂಜಿಕ್ಕಿ ಬಂದ ಅಳಿಯಾ ಊರಿಗೆ ಹೋಗಂಗಲ್ಲಂತ! ಇದು ಸುಳ್ಳಲ್ಲ ತಗಿರಿ. ಮಳಿ ಹಾಂಗ ಕನ್ನಡ ಅಲ್ವೇ ಮತ್ತೆ. ಬರೀ ಪದಗಳಲ್ಲಿ ಇದನ್ನು ಹಿಡಿದಿಡಲಾಗದು.

**ಕನ್ನಡ ಕನ್ನಡ ಎಂಥಾ ಕನ್ನಡ**
**ಸುಖವ ತರುವ ಕನ್ನಡ**
**ಸಮೃದ್ಧಿಯ ತರೂ ಕನ್ನಡ**
**ಎದೆಯ ಬಾನಂಗಳದಿ ನಲ್ಲೆಯ ಪಿಸುನುಡಿಯ ಸೊಗವ ತರುವ ಕನ್ನಡ.**

ಕನ್ನಡ ಭಾಷೆಯ ಪ್ರೀತಿಸಿದರ ನಿಮಗೂ ಹಿಂಗೇ ಅನಸ್ತೈತಿ ನೋಡಿ. ●